

ವಿಶ್ರಾಂತಿ ಪಡೆಯುತ್ತಿರುವ ಬೆನ್ನುತೊಟ್ಟಿಲು ಪೋರ್ಟರುಗಳು

ಎಂದ. ಮತ್ತೊಬ್ಬ ತನ್ನ ತಾಯಿಗೆ ಮೊಣಕಾಲು ನೋವು ಎಂದ. ಮೇಕೆಗೆ ಸೊಪ್ಪು ತರಲೆಂದು ಹೋಗುತ್ತಿದ್ದವಳೊಬ್ಬಳು ಕಣ್ಣಿಗೆ ಔಷಧಿ ಇದೆಯಾ ಎಂದು ಕೇಳಿದಳು. ಜೋಶಿಮಠದಲ್ಲಿದ್ದಾಗ ನಮ್ಮ ಊರುಮನೆಗಳನ್ನೆಲ್ಲ ವಿಚಾರಿಸುತ್ತಿದ್ದ ಒಬ್ಬಾಕೆ, 'ನೀವೇನೇ ಹೇಳಿ, ನಮ್ಮಲ್ಲಿಯ ಶುದ್ಧ ನೀರು–ಗಾಳಿ ಎಲ್ಲೂ ಸಿಗದು' ಎಂದು ಪಿಚ್ಚನೆ ನಕ್ಕಳು. ಅವಳ ಸುಂದರ ಮುಖಕ್ಕೆ ದೃಷ್ಟಿಬೊಟ್ಟಿನಂತೆ ಹಲ್ಲು ಹುಳುಕಾಗಿದ್ದವು. ಇಲ್ಲಿನ ಚಳಿಗೂ ನೀರಿಗೂ ದಂತಕ್ಷಯಕ್ಕೂ ಏನೋ ನಂಟಿರಬೇಕು. ವೈದ್ಯರ ಆಸ್ಪತ್ರೆಗಳ ಕೊರತೆಯಂತೂ ಅಗಾಧ. ನಮ್ಮ 'ಹೂವಿನ ಕಣಿವೆ' ಚಾರಣ ತಂಡದಲ್ಲಿದ್ದ ವೈದ್ಯರಿಗೆ ಹಾದಿಯಲ್ಲಿ ಉತ್ತರಾಖಂಡದ ಆರೋಗ್ಯಮಂತ್ರಿ ಭೇಟಿ ಮಾಡುವ ಅವಕಾಶ ಸಿಕ್ಕಿತ್ತು. ಮಂತ್ರಿಗಳು ತಮ್ಮಲ್ಲಿ ವೈದ್ಯರ ಕೊರತೆಯಿರುವುದನ್ನು ಒಪ್ಪಿಕೊಂಡರು. ಹಿಮಾಲಯಕ್ಕೆ ಆರೋಗ್ಯ ಹುಡುಕಿಕೊಂಡು ಹೋದ ನಮಗೆ ಸ್ಥಳೀಯರ ನೂರೆಂಟು ಕಾಯಿಲೆ ಕಷ್ಟಗಳೂ ದರ್ಶನ ಕೊಡುತ್ತವೆ.

ಚೆಲ್ಲಿಕೊಂಡ ಮನೆಗಳಿರುವ ಹಿಮಾಲಯದಲ್ಲಿ ಆಧುನಿಕ ಶಿಕ್ಷಣ ಕಡಿಮೆ. ಸರ್ಕಾರಿ ನೌಕರಸ್ಥರೂ ಹೆಚ್ಚಿಲ್ಲ. ಬಹುಮಂದಿ ರೈತರು, ಇಲ್ಲವೇ ಕೂಲಿಕಾರರು. ದುರ್ಗಮ ಕಾಡುಬೆಟ್ಟಗಳು ಆರ್ಥಿಕ–ಸಾಮಾಜಿಕ ಹಿಂದುಳಿಕೆಗೂ ಕಾರಣವಾಗಿವೆ. ಯಮುನೋತ್ರಿಯ ಹಾದಿಯಲ್ಲಿರುವ ಸಾಯನ್‌ಚೆಟ್ಟಿಯಲ್ಲಿ ಶಾಲಾ ಮಕ್ಕಳ ಜತೆ ಮಾತಾಡುತ್ತ 'ನಿಮಗೆ ಕಷ್ಟದ ಸಂಗತಿ ಯಾವುದು?' ಎಂದು ಕೇಳಿದೆ. ಶಾಲೆ ಬಿಟ್ಟ ಬಳಿಕ ಜಾರುನೆಲದಲ್ಲಿ ಮಳೆಯಲ್ಲಿ ಒಬ್ಬರೇ ಮನೆ ತಲುಪುವುದು ಎಂದರು. ಗೌರಿಕುಂಡದಲ್ಲಿ ನಾನು ಮಾತಾಡಿದ ಹೆಂಗಸು ತಮಗೆ ಅಡುಗೆ ಗ್ಯಾಸ್ ಇಲ್ಲದಿರುವುದು ದೊಡ್ಡ ಸಮಸ್ಯೆ ಎಂದಳು. ಆಕೆ ಎಂದೂ ಓಟು ಕೂಡ ಹಾಕಿರಲಿಲ್ಲ. ಸಂಕರಿಯಿಂದ ತಾಲೂಕ ಎಂಬ ಕೊನೆಯ ಹಳ್ಳಿಯವರೆಗೆ ಬಸ್ಸಿಲ್ಲದ ಹಾದಿಯಲ್ಲಿ ಒಬ್ಬ ಕೂಸು ಸತ್ತ ಬಾಣಂತಿಯನ್ನು ನಡೆಸಿಕೊಂಡು ಬರುವುದನ್ನು; ರೊಹತಾಂಗ್ ಪಾಸಿನಲ್ಲಿ ಶೂನ್ಯಡಿಗ್ರಿ ಚಳಿಯಲ್ಲಿ ಕೂಸನ್ನು ಬೆನ್ನಿಗೆ ಕಟ್ಟಿಕೊಂಡು ರಸ್ತೆಗೆ ಬಿದ್ದ ಹಿಮವನ್ನು ಗುಡಿಸುತ್ತಿದ್ದ ಪಹಾಡಿ ಮಹಿಳೆಯನ್ನು ನಾವು ಕಂಡಿದ್ದುಂಟು. ನಮ್ಮ ಬಸ್ಸಿನ ಕಂಡಕ್ಟರ್ ಭಂಡಾರಿ, ಬಸ್ಸು ಪ್ರಪಾತಕ್ಕೆ ಬೀಳದಂತೆ ಚಲಿಸುವ ಚಕ್ರವನ್ನೇ ನೋಡಲು ನೇಮಕವಾದಂತೆ ಬಾಗಿಲಿಗೆ ನೇತು ಬಿದ್ದಿರುತ್ತಿದ್ದನು. ಅವನ ಚಹರೆ, ಹಿಮಾಲಯ ಪ್ರಾಂತ್ಯಕ್ಕೆ ಶತಮಾನಗಳಿಂದ ಟಿಬೆಟ್ ಕಡೆಯಿಂದ ಮಂಗೋಲಿಯನ್ ಜನಾಂಗದ ವಲಸೆಯಿಂದಾದ ಸಂಕರವನ್ನು ಸೂಚಿಸುತ್ತಿತ್ತು. ಭಂಡಾರಿಗೆ ಸೈನಿಕನಾಗಬೇಕೆಂದು ಆಸೆ. ಅದಕ್ಕಾಗಿ ಅರ್ಧ ಲಕ್ಷ ಕೊಡಲೂ ತಯಾರು. ಆದರೆ ಕೆಲಸ ಸಿಗುತ್ತಿಲ್ಲ. ಮದುವೆ ವಯಸ್ಸು ಮೀರುತ್ತಿದೆ. ಕನ್ಯಾಶುಲ್ಕ ಹೊಂದಿಸುವುದು ಆಗುತ್ತಿಲ್ಲ. ಅವನ ಪ್ರಕಾರ ಹಿಂದೆ ಕನ್ಯಾಶುಲ್ಕಕ್ಕಾಗಿ ಹಲವು ಮದುವೆಯಾದ ಹೆಂಗಸರು ಇದ್ದರಂತೆ. ಈಗ ವರದಕ್ಷಿಣೆ ಪದ್ಧತಿ ಶುರುವಾಗಿದೆ.

ಹಿಮಾಲಯದ ಹೆಚ್ಚಿನ ಯುವಕರು ಪೋರ್ಟರು ಇಲ್ಲವೇ ಪ್ರವಾಸಿಗೈಡುಗಳು. ಬೆನ್ನಮೇಲೆ ಭಾರ ಹೊತ್ತು ನಡೆವವರು. ಕಾಲೇಜು ಕಲಿಯಲಾಗದ, ಕಲಿತರೂ ಕೆಲಸವಿಲ್ಲದ ಅವರು, ತಲೆಹೊರೆ, ಡೋಲಿ, ಕುದುರೆ, ಬೆನ್‌ತೊಟ್ಟಿಲುಗಳ ಮೂಲಕ ಚಾರಣಿಗರಿಗೂ ಯಾತ್ರಿಗಳಿಗೂ ನೆರವಾಗುವರು. ಬೆನ್ನತೊಟ್ಟಿಲ ಮೇಲೆ ತಮಗಿಂತ ದುಪ್ಪಟ್ಟು ವಜ್ಜೆಯ ಯಾತ್ರಿಕರನ್ನು ಹೊತ್ತು ಪರ್ವತ ಏರುವವರು. ಕೇದಾರ ಹಾದಿಯಲ್ಲಿ ಒಬ್ಬ ಬಡಕಲು ಪೋರ್ಟರ್, ಸ್ಥೂಲಕಾಯದ ಯಾತ್ರಿಕಳನ್ನು ಹೊತ್ತಿದ್ದವನು ಇಳಿವಾಗ ಜಾರಿ ಬಿದ್ದನು. ಆಕೆಗೂ ತುಸು ಪೆಟ್ಟಾಯಿತು. 'ನಾನು ನಿನಗೆ ಮಜೂರಿ ಕೊಡುವುದಿಲ್ಲ' ಎಂದಾಕೆ ಘೋಷಿಸಿದಳು. ಆತ ಎಷ್ಟು ಗೋಗರೆದರೂ ಆಕೆ ಕರಗಲಿಲ್ಲ. ಅವನು ಎಳೆಯ ಮಗುವಿನಂತೆ ಅಳತೊಡಗಿದ. ಅವನ



ಹಾದಿಯಲ್ಲಿ ಕಂಡ ಕಟ್ಟಿಗೆಕಾರ